ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2019

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿ ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ–19 ಸಂಚಿಕೆ–8 ಪುಟಗಳು–8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಮಳೆಗಾಲದ ತುಳುನಾಡ ಆಟ–ಊಟ






ಮಳೆಗಾಲ ಅದರಲ್ಲೂ ಆಟಿ ತಿಂಗಳು ತುಳುನಾಡಿಗೊಂದು ಸಂಧಿಕಾಲ. ಆಟಿ ತಿಂಗಳಲ್ಲಿ ಸುರಿಯುವ ಜಡಿಮಳೆಗೆ ಎಲ್ಲಾ ಚಟುವಟಿಕೆಗಳೂ ಸ್ತಬ್ಧವಾಗಿ ಬಿಡುತ್ತವೆ. ಈ ತಿಂಗಳಲ್ಲಿ ವ್ಯವಸಾಯದ ಚಟುವಟಿಕೆಗಳೂ ಒಂದು ಹಂತಕ್ಕೆ ಬಂದು ನಿಂತಿದ್ದು ಕೃಷಿಕರಿಗೆ ಸ್ವಲ್ಪ ವಿರಾಮದ ತಿಂಗಳು. ಹಾಗೆಯೇ ದೇವಸ್ಥಾನಗಳಲ್ಲಾಗಲೀ ಮನೆಯಲ್ಲಾಗಲೀ ವಿಶೇಷ ಪೂಜೆಯಾಗಲೀ ಹಬ್ಬ ಹರಿದಿನಗಳಾಗಲೀ ಇಲ್ಲದೇ ಇರುವುದರಿಂದ ಬಣಗುಟ್ಟುವ ದಿನಗಳಲ್ಲಿ ಮನತಣಿಸಲು ಹಲವಾರು ಬಗೆಯ ತಿಂಡಿಗಳು, ಕಾಲಕಳೆಯಲು ಆಡುವ ಆಟಗಳು ಇರುವುದು ತುಳುನಾಡಿನ ಸಂಸ್ಕೃತಿಗೆ ವಿಷೇಶವಾಗಿದೆ. ಆದರೆ ಜನರ ಜೀವನ ಪದ್ಧತಿ ಬದಲಾದಂತೆ ಆಟಿ ತಿಂಗಳ ಜನಪದ ಆಟಗಳು, ತಿಂಡಿತಿನಿಸುಗಳು ಒಂದು ಕಾಲಘಟ್ಟದಲ್ಲಿ ಮಾಯವಾಗುತ್ತಾ ಬಂದದ್ದನ್ನು ಗುರುತಿಸಿದ ಕೆಲವರು ಇತ್ತೀಚಿನ ವರ್ಷಗಳಲ್ಲಿ ಆಟಿ ತಿಂಗಳ ಆಚರಣೆ ಎಂಬ ಪದ್ಧತಿಯನ್ನು ಹುಟ್ಟುಹಾಕಿದರು. ಆ ನೆಪದಲ್ಲಾದರೂ ನಮ್ಮ ಪದ್ಧತಿಗಳ ಹಾಗೂ ಸಂಸ್ಕೃತಿಗಳ ನೆನಪು ಹಾಗೂ ಪರಿಚಯ ನಮಗೂ ನಮ್ಮ ಪೀಳಿಗೆಗೂ ಆಗುತ್ತಿರುವುದು ಸಂತೋಷದ ವಿಷಯ.

ತಾ.28–07–2019ರ ರವಿವಾರ ಸಂಜೆ ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ ಇವರಿಂದ ಇದೇ ರೀತಿಯ "ಮಳೆಗಾಲದಲ್ಲಿ ತುಳುನಾಡ ಆಟ–ಊಟ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಂಜೆ ಐದು ಗಂಟೆಗೆ ಮುಖ್ಯ ಸಭಾಂಗಣದಲ್ಲಿ ಚೆನ್ನೆಮಣೆ, ಪಗಡೆ. ಚೌಕಭಾರ, ಪೊಕ್ಕು ಆಟ, ಹಾವು ಏಣಿ ಆಟಗಳನ್ನು ಏರ್ಪಡಿಸಿ ಆಟವಾಡಲಾಯಿತು. ಡಾ। ವೈ. ಸುದರ್ಶನ ರಾಯರು ಈ ಆಟಗಳನ್ನು ಆಡುವ ಕ್ರಮ ಹಾಗೂ ನಿಯಮಗಳನ್ನು ವಿವರಿಸಿದರು. ಸಭಾಂಗಣದ ಹೊರಗೆ ಮಕ್ಕಳು ಉತ್ಸಾಹದಿಂದ ಲಗೋರಿ ಆಟ ಆಡಿದರು. ನಿವೃತ್ತ ಉಪಾಧ್ಯಾಯರಾದ ಪೆರ್ಡೂರಿನ ಶ್ರೀ ಹರಿನಾರಾಯಣ ಭಂಡಿಯವರು ಹೆಮ್ಮಕ್ಕಳಿಗೆ ಹುಲಿದನ ಆಟ ಆಡಿಸಿದರು ಶ್ರೀ ಪ್ರಭಾಕರ ಭಂಡಿಯವರು ಟೊಪ್ಪಿ ಆಟ ಆಡಿಸಿದರು. ಹೆಂಗಸರು ಹಾಗೂ ಮಕ್ಕಳಿಗೆ ಕಡುಬಿಗೆ ಬೇಕಾಗುವ ಹಲಸಿನೆಯ ದೊನ್ನೆ ಮಾಡುವ ಪ್ರಾತ್ಯಕ್ಷಿಕೆ ಏರ್ಪಡಿಸಲಾಯಿತು. ಆಟದೊಂದಿಗೆ ಬಿಸಿಬಿಸಿಯಾದ ಹರಿವೆ ಸೊಪ್ಪಿನ ವಡೆ ಹಾಗೂ ಕಷಾಯದ ಸರಬರಾಜು ಆಗುತ್ತಿತ್ತು. ಶ್ರೀ ಮ.ನಾ.ಹೆಬ್ಬಾರ್ ಹಾಗೂ ಕೆಲವು ಮಹಿಳೆಯರು ಜನಪದ ಹಾಡುಗಳನ್ನು ಕಾರ್ಯಕ್ರಮದುದ್ದಕ್ಕೂ ಹಾಡುತ್ತಾ ತಮ್ಮ ಜನಪದ ಹಾಡುಗಳ ಭಂಡಾರವನ್ನು ಬಿಚ್ಚಿಟ್ಟರು.

ರಾತ್ರಿ ಎಂಟಕ್ಕೆ ಊಟದ ಸಮಯದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಯು. ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಬಿ.ಜಯರಾಮ ರಾವ್ ಹಾಗೂ ಸಂಘದ ಪದಾಧಿಕಾರಿಗಳು ಮುತುವರ್ಜಿ ವಹಿಸಿ ಆಟಿತಿಂಗಳ ವಿಶೇಷ ಅಡುಗೆಯನ್ನು ತಯಾರಿಸಿ ಉಣಬಡಿಸಲು ಏರ್ಪಾಡು ಮಾಡಿದ್ದರು. ಉಪ್ಪಡಚ್ಚೀರಿನ ಪಲ್ಯ, ಪತ್ರೊಡೆಯ ಒಗ್ಗರಣೆ, ಅರಸಿನೆಲೆ ಗಟ್ಟಿ, ಪುಂಡಿಗಟ್ಟಿ, ಹಾಲುಬಾಯಿ, ಹಲಸಿನ ಹಪ್ಪಳ, ಹಲಸಿನ ಗಟ್ಟಿ ಹಾಗೂ ಗೆಣಸಿನ ಪಾಯಸದ ಔತಣ ರುಚಿಕಟ್ಟಾಗಿತ್ತು. ಸುಮಾರು 250 ಜನ ಸಮಾಜಬಾಂಧವರು ಕುಟುಂಬ ಸಮೇತ ಭಾಗವಹಿಸಿ ಕಾರ್ಯಕ್ರಮಕ್ಕೆ ವಿಶೇಷ ಕಳೆ ತಂದಿತ್ತರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟುರವರು ಧನ್ಯವಾದವಿತ್ತರು.

## ಶ್ರೀ ಶಾರದಾ ದೇವಸ್ಥಾನದಲ್ಲಿ ವೈದಿಕ ಶಿಬಿರ



ಉಡುಪಿಯ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಒಂದು ತಿಂಗಳ ವೈದಿಕ ಶಿಬಿರವನ್ನು ಆಯೋಜಿಸಲಾಯಿತು. ಪ್ರತಿ ದಿನ ಸಂಜೆ 6 ರಿಂದ 7 ಗಂಟೆಯ ತನಕ ವೇದಪಾಠ, ನಿತ್ಯಾನುಷ್ಠಾನ, ದೇವಪೂಜಾವಿಧಿಗಳನ್ನು ಕಲಿಸಲಾಯಿತು. ಹೆಜಮಾಡಿ ಶ್ರೀ ಕೃಷ್ಣರಾಜ ಭಟ್‌ರವರು ಗುರುಗಳಾಗಿ ಆಗಮಿಸಿ ಕಲಿಸಿದರು. ಸುಮಾರು 20 ಮಂದಿ ಸಮಾಜಬಾಂಧವರು ಈ ಶಿಬಿರದಲ್ಲಿ ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದರು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

ಆತ್ಮೀಯ ಸಮಾಜ ಬಾಂಧವರೇ,

ಸಂಘದ ವತಿಯಿಂದ ನಡೆಯಲಿರುವ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

### ಶೃಂಗೇರಿಯಲ್ಲಿ ಗುರುಗಳ ಭೇಟಿ

ತಾ.25–08–2019ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7–00 ಗಂಟೆಗೆ ಶ್ರೀ ಶಾರದಾ ಮಂಟಪದಲ್ಲಿ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಭೋಜನಾನಂತರ ಕಿಗ್ಗ, ಸಿರಿಮನೆ ಜಲಪಾತ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ ಸಾಯಂಕಾಲ ಹಿಂತಿರುಗಲಾಗುವುದು. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಮೆನೇಜರ್ ಶ್ರೀ ಅಜಿತ್‌ರಾವ್ (9448108920, 0820–2520754) ಅಥವಾ ಸಹಾಯಕ ಮೆನೇಜರ್ ಶ್ರೀ ನಾಗಭೂಷಣ್ (9964069306)ರವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ಅಂದಾಜು ಖರ್ಚು ರೂ.400/-

### ಹೂವಿನ ಪೂಜೆ

(ಮಹಿಳಾ ವೇದಿಕೆಯ ವತಿಯಿಂದ)
ತಾ.06–09–2019ನೇ ಶುಕ್ರವಾರ
ಸಮಯ : ಸಂಜೆ 5–00 ಗಂಟೆಗೆ

### ಋಗುಪಾಕರ್ಮ

ತಾ.11–09–2019ನೇ ಬುಧವಾರ
ಸಮಯ : ಬೆಳಿಗ್ಗೆ 10–00ರಿಂದ
ಅಪರಾಹ್ನ 12–15ರ ತನಕ

### ನವರಾತ್ರಿ ಕಾರ್ಯಕ್ರಮ–ಚಂಡಿಕಾಹೋಮ

ತಾ. 29–09–2019ರಿಂದ ತಾ. 08–10–2019ರ ವರೆಗೆ

ತಾ.29–09–2019ರಿಂದ ತಾ.07–10–2019ರ ವರೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಕಾರ್ಯಕ್ರಮಗಳು ಜರಗಲಿರುವುದು. ಪ್ರತಿ ದಿನ ಸಂಜೆ ದುರ್ಗಾನಮಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿರುವುದು.

ತಾ.08–10–2019ರ ವಿಜಯದಶಮಿಯಂದು ಶ್ರೀಶಾರದಾ ಮಂಟಪದಲ್ಲಿ ಚಂಡಿಕಾಹೋಮ ನಡೆಯಲಿರುವುದು.

ವಿ.ಸೂ. : ದುರ್ಗಾನಮಸ್ಕಾರ ಪೂಜೆಯ ಸೇವಾದಾರರಾಗ ಬಯಸುವವರು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಇಚ್ಛಿಸುವವರು ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ (9343560647, 9071366688)ರವರನ್ನು ಸಂಪರ್ಕಿಸಬೇಕಾಗಿ ವಿನಂತಿ.

ವಿವರವಾದ ಮಾಹಿತಿಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.

ಕಾರ್ಯದರ್ಶಿ ಕೋಶಾಧಿಕಾರಿ ಅಧ್ಯಕ್ಷರು
ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

# ಸಂಪಾದಕೀಯ.....

**- ಡಾ। ವೈ. ಸುದರ್ಶನ್ ರಾವ್**

ತುಳುನಾಡಿನಲ್ಲಿ ಸದ್ಯ ಸ್ಥಾನಿಕರ ಆಡಳಿತದಲ್ಲಿ ಒಟ್ಟು ಮೂವತ್ತೈದು ದೇವಸ್ಥಾನಗಳಿವೆ. ಈ ದೇವಸ್ಥಾನಗಳ ಆಡಳಿತವನ್ನು ತಲತಲಾಂತರದಿಂದ ನಮ್ಮವರೇ ನಡೆಸಿಕೊಂಡು ಬರುತ್ತಿದ್ದಾರೆನ್ನುವುದು ಈ ದೇವಸ್ಥಾನಗಳ ಹಿರಿಮೆ. ಇವುಗಳಲ್ಲಿ ಕೆಲವು ಗ್ರಾಮದೇವಸ್ಥಾನಗಳೂ ಆಗಿದ್ದು ಸುಮಾರು ಅರ್ಧಾಂಶ ದೇವಸ್ಥಾನಗಳಲ್ಲಿ ನಮ್ಮವರೇ ಅರ್ಚಕರಾಗಿಯೂ ತಂತ್ರಿಗಳಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಒಂದು ಕಾಲದಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನವೂ ಸೇರಿದಂತೆ ಇಂತಹಾ ಸಾವಿರಾರು ದೇವಸ್ಥಾನಗಳು ನಮ್ಮವರ ಆಡಳಿತದಲ್ಲಿದ್ದು ಕಾರಣಾಂತರದಿಂದ ನಮ್ಮವರ ಕೈ ತಪ್ಪಿ ಹೋಯಿತೆಂದು ಇತಿಹಾಸ ತಿಳಿಸುತ್ತದೆ.

ಅದು ಇತಿಹಾಸವಾಯಿತು. ಆದರೆ ಈಗಲೂ ನಮ್ಮ ಕೈಯಲ್ಲಿರುವ ಹಲವಾರು ದೇವಸ್ಥಾನಗಳು ಕೂಡಾ ನಮ್ಮ ಕೈತಪ್ಪಿ ಹೋಗುವ ಹಂತದಲ್ಲಿವೆ ಎನ್ನುವುದು ಇತಿಹಾಸಕ್ಕಿಂತಲೂ ಗಂಭೀರವಾದ ವಿಷಯ. ಯಾಕೆಂದರೆ ಯಾವುದೇ ಒಂದು ದೇವಸ್ಥಾನ ನಮ್ಮದೇ ಆಗಿ ಉಳಿಯಬೇಕಾದರೆ ಕನಿಷ್ಟ ದೇವಸ್ಥಾನವಿರುವ ಜಾಗ ನಮ್ಮವರ ಹೆಸರಿನಲ್ಲಿರಬೇಕು ಅಥವಾ ನಮ್ಮವರು ಈ ದೇವಸ್ಥಾನದ ಆಡಳಿತಗಾರರಾಗಿ ಹಲವಾರು ಶತಮಾನಗಳಿಂದ ಸೇವೆಸಲ್ಲಿಸುತ್ತಿದ್ದಾರೆನ್ನುವ ದಾಖಲೆಗಳನ್ನು ಇಟ್ಟುಕೊಂಡಿರಬೇಕು, ಅಷ್ಟು ಮಾತ್ರವಲ್ಲದೇ ಆ ದಾಖಲೆಗಳನ್ನು ಮುಜರಾಯಿ ಇಲಾಖೆಗೆ ಸಲ್ಲಿಸಿ ತನ್ನ ಅನುವಂಶಿಕ ಮೊಕ್ತೆಸರ ಅಥವಾ ಅನುವಂಶಿಕ ಅರ್ಚಕತನದ ಹಕ್ಕನ್ನು ಪ್ರತಿಪಾದಿಸಿ ಪಡೆದಿರಬೇಕು. ಎಲ್ಲಕ್ಕೂ ಮುಖ್ಯವಾಗಿ ದೇವಸ್ಥಾನದ ಆಡಳಿತ ಹಾಗೂ ಅರ್ಚಕತನವನ್ನು ಸತತವಾಗಿ ನಡೆಸಿಕೊಂಡು ಬರಬೇಕು ಹಾಗೂ ಅವರ ಹಕ್ಕುದಾರರು ಸಹಾ ತಮ್ಮ ಹಕ್ಕನ್ನು ಪ್ರತಿಪಾದಿಸಿ ಆಡಳಿತ ಹಾಗೂ ಅರ್ಚಕತನವನ್ನು ಮುಂದುವರಿಸಿಕೊಂಡು ಬರಬೇಕು.

ಸದ್ಯ ನಮ್ಮವರ ಆಡಳಿತದಲ್ಲಿರುವ ದೇವಸ್ಥಾನಗಳಲ್ಲಿ ಒಂದೊಂದರಲ್ಲಿ ಒಂದೊಂದು ತರಹದ ತಾಪತ್ರಯ ಇದೆ. ಹೆಚ್ಚಿನ ದೇವಾಲಯಗಳಿಗೆ ಗಣನೀಯವಾದ ಆದಾಯ ಇಲ್ಲದಿರುವುದರಿಂದ ಹಾಗೂ ಹಲವು ದೇವಾಲಯಗಳು ನಷ್ಟದಲ್ಲಿಯೇ ಇರುವುದರಿಂದ ಇತರರ ಕಣ್ಣು ಇವಕ್ಕೆ ಬಿದ್ದಿಲ್ಲ. ಮೊದಲನೆಯದಾಗಿ ಹೆಚ್ಚಿನ ಪುರಾತನ ದೇವಾಲಯಗಳು ಸರಕಾರಿ ಜಮೀನಿನಲ್ಲಿ ಅಥವಾ ಪರಂಭೋಕು ಜಾಗದಲ್ಲಿವೆ. ಇನ್ನು ಕೆಲವು ದೇವಸ್ಥಾನಗಳಲ್ಲಿ ನಮ್ಮವರು ಅನುವಂಶಿಕ ಹಕ್ಕನ್ನು ಸರಿಯಾದ ಸಮಯದಲ್ಲಿ ದಾಖಲಿಸದೇ ಇದ್ದುದರಿಂದ ಇತರರಿಗೆ ಆಡಳಿತಗಾರರಾಗುವ ಸಾಧ್ಯತೆಗಳು ಸದಾ ತೆರೆದಿದೆ. ಗ್ರಾಮಗಳಲ್ಲಿ ಪಾಲಿಸಿಕೊಂಡು ಬಂದಿರುವ ರೀತಿ ರಿವಾಜುಗಳಿಗೆ, ಕಟ್ಟುಕಟ್ಟಳೆಗಳಿಗೆ ಇನ್ನೂ ಗೌರವ ಇರುವುದರಿಂದ ಇತರರು ಈ ಹಕ್ಕಿಗೆ ಕೈಹಾಕಿಲ್ಲ. ಅದುದರಿಂದ ಈ ದೇವಸ್ಥಾನಗಳು ನಮ್ಮವರ ಕೈಯಲ್ಲಿ ಇನ್ನೂ ಉಳಿದಿವೆ.

ಎಲ್ಲಕ್ಕೂ ಮುಖ್ಯವಾಗಿ ಜ್ವಲಂತ ಸಮಸ್ಯೆ ಇರುವುದು ಕೈಯಲ್ಲಿರುವ ಆಡಳಿತದ ಹಕ್ಕು ಹಾಗೂ ಅರ್ಚಕತನದ ಹಕ್ಕನ್ನು ಮುಂದುವರಿಸಿಕೊಂಡು ಹೋಗುವುದು. ಗ್ರಾಮದ ದೇವಸ್ಥಾನವೊಂದರಲ್ಲಿ ತಮಗಿಷ್ಟ ಬಂದ ಸಮಯದಲ್ಲಿ ತನಗಿಷ್ಟ ಬಂದ ಕ್ರಮದಲ್ಲಿ ಪೂಜೆ ಪುನಸ್ಕಾರಗಳನ್ನು ನಡೆಸಿಕೊಂಡು ಹೋಗಲು ಆಗುವುದಿಲ್ಲ. ಈ ದೇವಸ್ಥಾನಗಳಲ್ಲಿ ನಡೆಸಿಕೊಂಡು ಬರುತ್ತಿರುವ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಪಾಲಿಸಲೇಬೇಕೆಂದು ಗ್ರಾಮಸ್ಥರು ಅಪೇಕ್ಷಿಸುವುದರಿಂದ ಇಂತಹಾ ದೇವಸ್ಥಾನಗಳ ಆಡಳಿತವಾಗಲೀ ಅರ್ಚಕತನವಾಗಲೀ ಅಷ್ಟೊಂದು ಸುಲಭದ ಕೆಲಸವಲ್ಲ. ಮಡಿ ಮೈಲಿಗೆಗಳನ್ನು ಪಾಲಿಸಿಕೊಂಡು ಮೂರು ಹೊತ್ತು ಅಭಿಷೇಕ, ಅಲಂಕಾರ, ಪೂಜೆ, ನೈವೇದ್ಯ, ಪಾರಾಯಣ, ಭಕ್ತರ ಸೇವೆಗಳ ನಿಭಾವಣೆ, ವಿಶೇಷ ದಿನಗಳ ನಿರ್ವಹಣೆ, ಅನ್ನಸಂತರ್ಪಣೆ, ಬಲಿಪೂಜೆ, ರಂಗಪೂಜೆ, ಕಾರ್ತಿಪೂಜೆ, ಸೋಣಾರತಿ, ಹಗಲು ಉತ್ಸವ, ರಾತ್ರಿ ಉತ್ಸವ, ಪರಿವಾರ ದೈವ ಭೂತಗಳ ನೇಮ, ಕೋಲ ಇತ್ಯಾದಿ ಧಾರ್ಮಿಕ ವಿಧಿಗಳನ್ನು ವರ್ಷ ಪೂರ್ತಿ ಸಂಪ್ರದಾಯಕ್ಕೆ ಧಕ್ಕೆಯಾಗದಂತೆ ನಡೆಸಿಕೊಂಡು ಹೋಗುವುದು ಮಾತ್ರವಲ್ಲ, ಜೊತೆಗೆ ಕಟ್ಟಡದ ನಿರ್ವಹಣೆಯೂ ದೊಡ್ಡ ಜವಾಬ್ದಾರಿಯಾಗಿದೆ. ತನ್ನ ನಂತರ ಈ ಜವಾಬ್ದಾರಿಯನ್ನು ಹೊರುವಂತೆ ಮುಂದಿನ ಪೀಳಿಗೆಯನ್ನು ಮನವೊಲಿಸುವುದು ಈ ದೇವಸ್ಥಾನಗಳಿಗೆ ದೊಡ್ಡ ಸವಾಲೇ ಆಗಿದೆ.

ಈ ಸವಾಲುಗಳನ್ನು ಎದುರಿಸಿಕೊಂಡು ನಮ್ಮ ದೇವಸ್ಥಾನಗಳನ್ನು ನಮ್ಮ ಕೈಯಲ್ಲೇ ಉಳಿಸಿಕೊಳ್ಳುವುದು ಹೇಗೆ? ಸಮಾಜ ಬಾಂಧವರ ಸಕ್ರಿಯ ಭಾಗವಹಿಸುವಿಕೆ ಇಲ್ಲದೇ ಇದು ಸಾಧ್ಯವೇ ಇಲ್ಲ. ಈ ನಿಟ್ಟಿನಲ್ಲಿ ಈ ಕ್ಷೇತ್ರದಲ್ಲಿ ಅನುಭವವುಳ್ಳವರ ಅಭಿಪ್ರಾಯ, ಸಲಹೆಗಳಿದ್ದಲ್ಲಿ ದಯವಿಟ್ಟು ಬರೆದು ಕಳುಹಿಸಿ. ಪ್ರಕಟಿಸಲು ಸಂತೋಷಪಡುತ್ತೇವೆ.

**ಸಂಪಾದಕ ಮಂಡಳಿ**
ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ


*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436
**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging



ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
**ಹರಿಕೃಷ್ಣ ಡಿಜಿಟಲ್ಸ್**
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



ಡಾ। ಸಂಜಾತ ವಿ. ಎಸ್.
B.D.S., MBA (HCS)
ಡೆಂಟಲ್ ಸರ್ಜನ್
ಬೆಳ್ಳೆ ಡೆಂಟಲ್ ಕೇರ್
(ಎಕ್ಸ್‌ರೇ ವ್ಯವಸ್ಥೆಯೊಂದಿಗೆ)
ಫರ್ನ್ಸ್ ಕಾಂಪ್ಲೆಕ್ಸ್,
ಬೆಳ್ಳೆ ಪಂಚಾಯತ್ ಎದುರು, ಮೂಡುಬೆಳ್ಳೆ
ಮೊಬೈಲ್. : 9449419097, 9448523635



*With Best Compliments from :*
*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

**With Best Compliments From :**
***Rajathadri Hotel Pvt. Ltd.
Lodging & Boarding
Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water
SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

# ಮೂಡುಬಿದಿರೆಯಲ್ಲಿ ಆಟಿದ ಕೂಟ ಮತ್ತು ಮಹಾಸಭೆ

ತಾ.28.07.2019ರಂದು ಮೂಡುಬಿದ್ರಿ ಆದಿಶಂಕರ ಬ್ರಾಹ್ಮಣ ಪರಿಷತ್ತಿನ ವತಿಯಿಂದ ಮೂಡಬಿದ್ರೆಯ ಅಮರಾವತಿ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಆಟಿದ ಕೂಟ ಹಾಗೂ ವಾರ್ಷಿಕ ಮಹಾಸಭೆಯು ನೆರವೇರಿತು. ಮೊದಲಾಗಿ ಪರಿಷತ್ತಿನ ಸದಸ್ಯರಿಂದ "ಮಹಿಷಮರ್ದಿನಿ" ಎಂಬ ಯಕ್ಷಗಾನ ಬಯಲಾಟವು ಶ್ರೀ ದೇವಾನಂದ ಭಟ್ರ ನಿರ್ದೇಶನದಲ್ಲಿ ನಡೆಯಿತು. ನಂತರ ಮಧ್ಯಾಹ್ನದ ಭೋಜನದಲ್ಲಿ ಸದಸ್ಯರು ಮನೆಯಲ್ಲಿ ಮಾಡಿ ತಂದ ವಿವಿಧ ಖಾದ್ಯಗಳನ್ನು ಸವಿದರು. ಅಪರಾಹ್ನ ಪರಿಷತ್ತಿನ ಅಧ್ಯಕ್ಷರಾದ ಬಿ. ಚಂದ್ರಶೇಖರ ರಾಯರ ಅಧ್ಯಕ್ಷತೆಯಲ್ಲಿ 29ನೇ ಮಹಾಸಭೆಯು ನಡೆಯಿತು. ಪರಿಷತ್ತಿನ ಮಹಿಳಾ ಸದಸ್ಯರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವು ಪ್ರಾರಂಭಗೊಂಡಿತು. ಇತ್ತೀಚೆಗೆ ನಿಧನಗೊಂಡ ಸಮಾಜಬಾಂಧವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಯಂ. ಜಗದೀಶ ರಾವ್ ಮಂಡಿಸಿದರು. ಪರಿಷತ್ತಿನ ಲೆಕ್ಕ ಪರಿಶೋಧನಾ ವರದಿಯನ್ನು ಖಚಾಂಚಿ ಶ್ರೀ ರಾಯಿ ರಾಜಕುಮಾರ್ ಮಂಡಿಸಿದರು ಮತ್ತು ಸದಸ್ಯರ ಅನುಮೋದನೆಯನ್ನು ಪಡೆಯಲಾಯಿತು. ನಂತರ ಬೊಕ್ಕಸ ಶ್ರೀ ಕೃಷ್ಣರಾಜ ರಾವ್ ಮತ್ತು ಶ್ರೀಮತಿ ಜ್ಯೋತಿ ಕೆ., ಶ್ರೀ ದೇವಾನಂದ ಭಟ್, ಶ್ರೀ ಜಯರಾಮ ರಾವ್ ಬಿ., ಶ್ರೀ ನಂದಿಕೂರು ಶ್ರೀ ಜನಾರ್ಧನ ರಾವ್, ಶ್ರೀ ನಾಗರಾಜ ಶರ್ಮ ಮಂಗಳೂರು ಇವರನ್ನು ಅಧ್ಯಕ್ಷರು ಗೌರವಿಸಿದರು. ಪ್ರತಿಭಾವಂತ ವಿದ್ಯಾರ್ಥಿಗಳಾದ ಕು.ಭೂಮಿಕಾ ಮತ್ತು ಚಿ। ಆದರ್ಶ ಇವರನ್ನು ಪುರಸ್ಕರಿಸಲಾಯಿತು. ನಂತರ ಡಿಗ್ರಿ ಕಲಿಯುತ್ತಿರುವ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಯಿತು. ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ನಂತರ ನೂತನ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ವೈಭವವು ಪರಿಷತ್ತಿನ ಸದಸ್ಯರಿಂದ ನಡೆಯಿತು.

ನೂತನ ಆಡಳಿತ ಮಂಡಳಿಯು ಈ ಕೆಳಗಿನಂತೆ ಇದೆ. ಶ್ರೀ ಸುರೇಶ್ ಕುಮಾರ್ ರಾವ್ ಲಾಡಿ (ಗೌರವಾಧ್ಯಕ್ಷರು), ಶ್ರೀ ದೇವಾನಂದ ಭಟ್ ಬೆಳ್ವಾಯಿ (ಅಧ್ಯಕ್ಷರು), ಶ್ರೀಮತಿ ಶುಭಾ ಹೆಬ್ಬಾರ್ (ಉಪಾಧ್ಯಕ್ಷರು), ಶ್ರೀ ಕಳಮೆ ಗಿರೀಶ್ ಕುಮಾರ್ (ಉಪಾಧ್ಯಕ್ಷರು), ಶ್ರೀ ಬಿ. ಸುರೇಶ್ ರಾವ್ (ಕಾರ್ಯದರ್ಶಿ), ಶ್ರೀ ಬಿ. ಗಣೇಶ ರಾವ್ (ಜತೆ ಕಾರ್ಯದರ್ಶಿ), ಶ್ರೀ ಪ್ರಕಾಶ ರಾವ್ ಶಿರ್ತಾಡಿ (ಜತೆ ಕಾರ್ಯದರ್ಶಿ), ಶ್ರೀ ಬಿ.ಕೆ ವಸಂತರಾಜ ರಾವ್ (ಕೋಶಾಧಿಕಾರಿ), ಸದಸ್ಯರುಗಳು : ಶ್ರೀಮತಿ ವಾಣಿಶ್ರೀ ಪುತ್ತಿಗೆ , ಶ್ರೀಮತಿ ಪ್ರೀತಿ ರಾವ್ ಪುತ್ತಿಗೆ, ಶ್ರೀ ಜಯರಾಮ ರಾವ್ ಅಲಂಗಾರು, ಶ್ರೀ ಅನಂತ ಜನಾರ್ಧನ ಅಂಬೂರಿ, ಶ್ರೀ ಭೋಜ ರಾವ್ ಶಿರ್ತಾಡಿ, ಶ್ರೀಮತಿ ಸುಜಾತ ರಾವ್ ಪುತ್ತಿಗೆ, ಶ್ರೀ ಮಂಜುನಾಥ ರಾವ್ ಕಟೀಲು.



ಮೂಡುಬಿದಿರೆ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ ಇದರ ಪ್ರಸ್ತುತ ಸಾಲಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಂ.ದೇವಾನಂದ ಭಟ್ ಬೆಳುವಾಯಿ ಇವರು ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಪ್ರಧಾನ ಕಾರ್ಯದರ್ಶಿಯೂ ಆಗಿದ್ದು, ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ (ರಿ.), ಬೆಳುವಾಯಿ ಇದರ ಸ್ಥಾಪಕಾಧ್ಯಕ್ಷರಾಗಿ ಸತತ 22 ವರುಷಗಳಿಂದ ಸಮರ್ಥ ಸಂಘಟಕರಾಗಿ ದೇಶ ವಿದೇಶಗಳಗಲ್ಲಿ ಹೆಸರುಗಳಿಸಿದ್ದಾರೆ. ಅಲ್ಲದೆ ಮೂಡುಬಿದ್ರಿ ಎಂ.ವಿ.ಎಸ್.ಎಸ್ ಬ್ಯಾಂಕಿನ ನಿರ್ದೇಶಕರಾಗಿಯೂ ಸೇವೆಸಲ್ಲಿಸುತ್ತಿರುವರು. ವೃತ್ತಿಯಲ್ಲಿ ಛಾಯಾಗ್ರಾಹಕರಾಗಿರುವ ಇವರು ಬೆಳುವಾಯಿ, ಮೂಡುಬಿದಿರೆ, ಎಡಪದವಿನಲ್ಲಿ ತನ್ನ ಸ್ವಂತದ ಶೋಭಾ ಸ್ಟುಡಿಯೋ ಹೊಂದಿದ್ದು ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದು ನಮ್ಮ ಮೂಡುಬಿದಿರೆ ಸ್ಥಾನಿಕ ಸಂಘದ ಅಭ್ಯುದಯಕ್ಕೆ ಸದಾ ಉತ್ತೇಜನ ನೀಡುತ್ತಾ ಆನೇಕ ಕಾರ್ಯಯೋಜನೆಗಳನ್ನು ರೂಪಿಸಿಕೊಂಡಿರುತ್ತಾರೆ

## ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

### ಆಗಸ್ಟ್ ತಿಂಗಳ ಶಾಶ್ವತ ಸೇವಕರ್ತರ ವಿವರ

1 ಪ್ರಕಾಶ್ ರಾವ್, ಲಕ್ಷ್ಮೀಂದ್ರ ನಗರ
2 ನಂದಿಕೂರು ಅನಂತ ಪದ್ಮನಾಭ ಭಟ್, ಬನ್ನಂಜೆ
3 ಕೆ. ಪರಮೇಶ್ವರ್ ರಾವ್, ಲೋನಂದ
4 ಕುಂಕುಮ್ ರಾಜೇಂದ್ರ ಕುಮಾರ್, ನ್ಯೂ ದೆಹಲಿ
5 ಬಾಲಸುಬ್ರಹ್ಮಣ್ಯ ರಾವ್, 76 ಬಡಗಬೆಟ್ಟು
6 ಸ್ವಾತಿ ಎಸ್. ಪೈ, ಮುಂಬೈ
7 ಐ.ಪಿ ಸುಧೀರ್ ಕುಮಾರ್, ವಿಭುದಪ್ರಿಯ ನಗರ
8 ಎನ್.ಎ.ಪಿ ಭಟ್, ಬನ್ನಂಜೆ
9 ಗಣಪತಿ ಎಮ್ ನಾಯಕ್, ಕಲ್ಲಂಕ
10 ಡಾ। ಗೋಪಾಲಕೃಷ್ಣ ರಾವ್, ಮುಂಬೈ
11 ಅಭಿಷೇಕ್ ಶೆಟ್ಟಿ, ಬೆಂಗಳೂರು
12 ಚಿಟ್ಪಾಡಿ ಸುನಂದ ರಾವ್
13 ಬಿ. ಜನಾರ್ಧನ್ ರಾವ್, ದೊಂಬಿವಿಲಿ
14 ಶೇಶಮ್ಮ, ಮೂಡುಅಲೆವೂರು
15 ಎ. ಕೃಷ್ಣ ರಾವ್, ಮಂಗಳೂರು
16 ಸುಕುಮಾರ ಎನ್. ಎನ್. ಶ್ರೀಪತಿ ವಾಸುದೇವ ಶ್ಯಾನುಭಾಗ್, ಬನ್ನಂಜೆ
17 ಕೆ. ರಾಮದಾಸ ರಾವ್, ಬನ್ನಂಜೆ
18 ತಂತ್ರಾಡಿ ಸರಸ್ವತಿ ವಾಸುದೇವ ಶ್ಯಾನುಭಾಗ್, ಬನ್ನಂಜೆ
19 ಚಿತ್ರ ರಾಮಚಂದ್ರನ್, ಮುಂಬೈ
20 ಎನ್.ಶಿವಪ್ರಸಾದ್ ಭಟ್, ಬನ್ನಂಜೆ
21 ವನಜಾಕ್ಷಿ ಅಮ್ಮ, ಇನ್ನಂಜೆ
22 ವಿನಯ ವೈ.ಬಿ, ಬನ್ನಂಜೆ
23 ಪ್ರಮೋದ ಮಲ್ಪೆ
24 ಜಯ್‌ರಾಜ್, ಮಲ್ಪೆ
25 ಎ.ರಾಮಮೋಹನ್ ರಾವ್,ಮುನಿಯಾಲ್
26 ಎಸ್.ಆರ್ ಎವರ್ಮಾಳು, ಕೋಟೇಶ್ವರ

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು

ಅಂತರಾಷ್ಟ್ರೀಯ ಮಟ್ಟದ ಸ್ಥಾನಿಕ ಸಂಘಗಳು
ಮತ್ತು ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟದ ವತಿಯಿಂದ

ಬೆಂಗಳೂರಿನ ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸಾನಿಧ್ಯದಲ್ಲಿ
**ತಾ.11–01–2020 ಮತ್ತು ತಾ.12–01–2020ರಂದು**

**ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ–2020**

ಜರಗಲಿದೆ.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
ಅಖಿಲಭಾರತ ಸ್ಥಾನಿಕ ಬ್ರಾಹ್ಮಣ ಸಭಾ,
ಬೆಂಗಳೂರು

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ),
ಮಂಗಳೂರು

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE


Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ರಾವ್ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
**SRI M. SHAILESH RAO** Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2019-2020

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.25-09-2019ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.

– ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ 2019-2020

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2019-2020ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಮತ್ತಿತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.25-09-2019**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2019-2020

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿಗಳೊಂದಿಗೆ **ತಾ.25-09-2019**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

– ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

## ಉದಯಚಂದ್ರ ಪ್ರತಿಭಾ ಪುರಸ್ಕಾರ 2019-2020

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2018-19ನೇ** ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ – 576 102** ಇಲ್ಲಿಗೆ **ತಾ.25-09-2019**ರೊಳಗೆ ಕಳುಹಿಸಿ ಕೊಡಬೇಕು.

– ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.

## ಸಿಂಹ ಮಾಸದ ವಿಶೇಷ ದಿನಗಳು

| | | | |
|---|---|---|---|
| 17-08-2019 | ಸಿಂಹ ಸಂಕ್ರಮಣ | 01-09-2019 | ಗೌರೀ ತೃತೀಯಾ |
| 19-08-2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9-29ಕ್ಕೆ | 02-09-2019 | ಗಣೇಶ ಚತುರ್ಥಿ |
| | | 09-09-2019 | ಸರ್ವೈಕಾದಶಿ |
| 23-08-2019 | ಶ್ರೀ ಕೃಷ್ಣಜನ್ಮಾಷ್ಟಮಿ ಚಂದ್ರೋದಯ ರಾತ್ರಿ 12-10ಕ್ಕೆ | 11-09-2019 | ಸೌರ ಋಗುಪಾಕರ್ಮ |
| | | 12-09-2019 | ಅನಂತನ ಚತುರ್ದಶಿ |
| 24-08-2019 | ಶ್ರೀ ಕೃಷ್ಣ ಲೀಲೋತ್ಸವ | 14-09-2019 | ಹುಣ್ಣಿಮೆ, ಮಹಾಲಯಾರಂಭ |
| 26-08-2019 | ಸ್ಮಾರ್ತೈಕಾದಶಿ | 15-09-2019 | ವರ್ಷ ಋತು, ಭಾದ್ರಪದ ಮಾಸದ ಕೃಷ್ಣಪಕ್ಷಾರಂಭ |
| 27-08-2019 | ಭಾಗವತ-ವೈಷ್ಣವೈಕಾದಶಿ | | |
| 30-08-2019 | ಅಮಾವಾಸ್ಯೆ | 17-09-2019 | ಕನ್ಯಾ ಸಂಕ್ರಮಣ ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8-44ಕ್ಕೆ |
| 31-08-2019 | ವರ್ಷ ಋತು, ಭಾದ್ರಪದ ಮಾಸದ ಶುಕ್ಲಪಕ್ಷಾರಂಭ | | |

ದೂರವಾಣಿ : 2522408

# ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

L.No.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ. ಉಡುಪಿ-576101.

## 2018-2019ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ, ತಾ. : 20-07-2019

ನಮ್ಮ ಸಂಘದ 2018-2019ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.08.09.2019ನೇ ರವಿವಾರ ಪೂರ್ವಾಹ್ನ ಘಂಟೆ 11-00ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡಾವಳಿಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ನಿರ್ಣಯದಂತೆ**

**ಪಟ್ಟಾಭಿರಾಮ ಎನ್.ಎಸ್**
ಕಾರ್ಯದರ್ಶಿ

**ಕೆ. ವೇಣುಗೋಪಾಲ್ ರಾವ್**
ಅಧ್ಯಕ್ಷರು

**ಕಾರ್ಯಕ್ರಮ ಸೂಚಿ**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
4. ತಾ:26-08-2018ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
5. 2018-2019ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
6. 2018-2019ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ.
7. 2018-2019ನೇ ಸಾಲಿನ ಅಂದಾಜು ಆಯ-ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
8. 2019-2020ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
9. 2018-2019ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
10. 2019-2020ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
11. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.
12. ವಂದನಾರ್ಪಣೆ

**ವಿ.ಸೂ. :**

1. **ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.**
2. **ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶದ ಹಣವನ್ನು ನಿಯಮದಂತೆ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.**
3. **ಸಹಕಾರ ಕಾಯ್ದೆ ಹಾಗೂ ಸಂಘದ ಉಪನಿಯಮಗಳನ್ವಯ ಸದಸ್ಯರು 5 ಮಹಾಸಭೆಗಳಲ್ಲಿ ಕಡ್ಡಾಯವಾಗಿ 3 ಮಹಾಸಭೆಗಳಿಗೆ ಹಾಜರಾಗಬೇಕು ಮತ್ತು ಸತತ 3 ವರ್ಷಗಳ ಕಾಲ ನಿಗದಿತ ಕನಿಷ್ಠ ವ್ಯವಹಾರವನ್ನು ಮಾಡಬೇಕಾಗಿದ್ದು, ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.**

# ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.

2018-19ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 20-10-2019 ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 30-09-2019ರ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. **–ಕೆ. ಸದಾಶಿವ ಶಾಸ್ತ್ರಿ**




ಎಮ್. ದೇವಾನಂದ್ ಭಟ್
Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

SAMPATH KUMAR Mobile : 9741508881

TRISHULINI TOURIST

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

## 2018–19ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯ ಬಾಂಧವರೇ, ತಾ.14.07.2019

ನಮ್ಮ ಸಂಘದ 2018–19ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.15.09.2019ನೇ ರವಿವಾರ ಅಪರಾಹ್ನ 4–00 ಗಂಟೆಗೆ ಸರಿಯಾಗಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿರುವುದು. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

### ವಿಷಯ ಸೂಚಿ

1. ಪ್ರಾರ್ಥನೆ
2. ಶ್ರದ್ಧಾಂಜಲಿ
3. ಸ್ವಾಗತ
4. 2018–19ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ
5. 2017–18ನೇ ಸಾಲಿನ ವಾರ್ಷಿಕ ಮಹಾಸಭೆ ವರದಿಯ ಮಂಡನೆ ಮತ್ತು ಅಂಗೀಕಾರ
6. 2018–19ನೇ ವರ್ಷದ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ವರದಿಯ ಮಂಡನೆ ಮತ್ತು ಅಂಗೀಕಾರ
7. 2018–19ನೇ ವರ್ಷದ ಆಯ–ವ್ಯಯ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
8. 2019–20ನೇ ವರ್ಷದ ಅಂದಾಜು ಆಯ–ವ್ಯಯ ಪಟ್ಟಿಯ ಮಂಡನೆ ಮತ್ತು ಅಂಗೀಕಾರ.
9. ಭೋಜನ ಸಭಾಂಗಣ ಮೇಲ್ಛಾವಣಿಯ ನವೀಕರಣದ ಬಗ್ಗೆ
10. ಶ್ರೀ ಶಾರದಾ ದೇವಸ್ಥಾನದ ಕುಂಭಾಭಿಷೇಕದ ಬಗ್ಗೆ
11. 2019–20ನೇ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ
12. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳು *
13. ಧನ್ಯವಾದ

ಸಹಿ/-
**ಕಾರ್ಯದರ್ಶಿ**

**ವಿ.ಸೂ. : * ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ತಾ.10-09-2019ರ ಸಂಜೆ 6 ಗಂಟೆಯ ಒಳಗೆ (ಕಛೇರಿಯ ಕೆಲಸದ ಸಮಯದಲ್ಲಿ) ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ಕಛೇರಿಗೆ ತಲುಪಿಸಬೇಕು.**

# ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ

ಭಕ್ತಾಭಿಮಾನಿಗಳೇ,

**ಇದೇ ಬರುವ ದಿನಾಂಕ 17–08–2019ನೇ ಶನಿವಾರ ಸಿಂಹ ಸಂಕ್ರಮಣದಿಂದ ಮೊದಲ್ಗೊಂಡು ತಾ.17–09–2019ರ ಕನ್ಯಾ ಸಂಕ್ರಮಣದವರೆಗೆ ದೇವಳದಲ್ಲಿ**

## ಸೋಣಾರತಿ–ಹೂವಿನ ಪೂಜೆ

ದೇವಳದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ನಡೆಯಲಿದ್ದು, ಭಕ್ತಾಧಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ವಿ.ಸೂ. : ಪೂಜೆ ಮಾಡಿಸುವವರು ಬರುವಾಗ ಹೂ, ಹಣ್ಣುಕಾಯಿ ತರಬೇಕು. ಸೇವಾದರ ರೂ.300**
**ಪೂಜೆಯ ಸಮಯ ಪ್ರತಿದಿನ ರಾತ್ರಿ 6–30 ರಿಂದ 7.30ರ ವರೆಗೆ**

**ವಿವರಗಳಿಗೆ ಇವರನ್ನು ಸಂಪರ್ಕಿಸಿ : ದಿವಾಕರ ರಾವ್ (9902169119), ವಿಜಯ ದೇವರಾಯ ಶರ್ಮ (8970485179) ಸುಧಾಕರ ಬೆಳ್ಳೆ (9845193103), ಬಿ. ಜಯರಾವ್ ರಾವ್ (9844545040)**

**–ಆಡಳಿತ ಮಂಡಳಿ**

Ph : 98459 92859

**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.




**RAJESH POWER PRESS**
**PRINTERS & PUBLISHERS**
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
**QUALITY FIRST AND ALWAYS**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

ಶ್ರೀ ಕ್ಷೇತ್ರ ಉದಯಾದ್ರಿ

# ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

ಪಡುಬಿದ್ರಿ, ಉಡುಪಿ ಜಿಲ್ಲೆ–574111

## ಪುಷ್ಪರಥ ನಿರ್ಮಾಣ

ಉಡುಪಿ ಜಿಲ್ಲೆ ಕಾಪು ತಾಲೂಕಿನ ಪಡುಬಿದ್ರಿಯು ತನ್ನದೇ ಆದ ಧಾರ್ಮಿಕ ಹಿನ್ನಲೆಯುಳ್ಳ ಪುಣ್ಯ ಭೂಮಿಯಾಗಿರುತ್ತದೆ. ಈ ಕ್ಷೇತ್ರದಲ್ಲಿರುವ ಶ್ರೀ ಬಾಲಗಣಪತಿಯು ಉತ್ತರಾಭಿಮುಖವಾಗಿ ಚತುರ್ಭುಜ ಫಲಹಸ್ತನಾಗಿ ನಿಂತಿದ್ದು ಅಪರೂಪದ ದೇವಳ ಎನಿಸಿದೆ. ಪಾಶ ಅಂಕುಶ, ಅಭಯ ವರದ ಹಸ್ತವಿರುವ ಉಪದೇವತೆ ಮಾತೆ ಪ್ರಸನ್ನ ಪಾರ್ವತಿಯ ಸುಂದರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

ಪ್ರಾಜ್ಞರ ನಿರ್ದೇಶನದಂತೆ ಜೀರ್ಣಗೊಂಡ ಈ ದೇಗುಲವನ್ನು ಆಗಮ ಶಾಸ್ತ್ರೋಕ್ತವಾಗಿ ವಾಸ್ತು ಶಿಲ್ಪಿಗಳಿಂದ ಅಷ್ಟಕೋನಾಕೃತಿಯ ಗರ್ಭಗುಡಿ, ಶಿಲಾಮಯ ತೀರ್ಥ ಮಂಟಪ, ಅಂಬೆಲ, ಸುತ್ತುಪೌಳಿ, ಒಳಾಂಗಣಕ್ಕೆ ಶಿಲೆಯ ಹೊದಿಕೆ ಇತ್ಯಾದಿ ನಿರ್ಮಿಸಿ 2008 ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಶ್ರೀ ದೇವಳಕ್ಕೆ ವಸಂತ ಮಂಟಪ, ಆವರಣ ಗೋಡೆಯನ್ನು 2013 ರಲ್ಲಿ ಭಕ್ತ ಮಹಾಶಯರಿಂದ ನಿರ್ಮಿಸಿ ಬ್ರಹ್ಮಕಲಶಾಭಿಷೇಕವನ್ನು ಮಾಡಲಾಗಿದೆ.

ಗ್ರಾಮೀಣ ಪ್ರದೇಶದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ದೇವಳದ ಭಕ್ತರಾದುದರಿಂದ ಧಾರ್ಮಿಕ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲು ಅನುಕೂಲವಾಗುವಂತೆ ಸಭಾಂಗಣವೊಂದು ಅಗತ್ಯವೆಂದು ಕಂಡು ಬಂದ ಕಾರಣ 2014 ರಲ್ಲಿ ಶ್ರೀ ದೇವಳದ ಮುಂಭಾಗದ ವಿಶಾಲವಾದ ಅಂಗಣಕ್ಕೆ ಜಿ.ಐ.ಶೀಟಿನ ಛಾವಣಿಯನ್ನು ಮಾಡಿ, ತೆರೆದ ಸಭಾಂಗಣಕ್ಕೆ ವೇದಿಕೆಯನ್ನು ನಿರ್ಮಿಸಲಾಗಿದೆ. 2016 ರಲ್ಲಿ ಸಾರ್ವಜನಿಕ ಧನಸಹಾಯದಿಂದ ಶ್ರೀ ದೇವರ ಹಿಂಭಾಗದಲ್ಲಿ 200 ಜನರಿಗಾಗುವ ಭೋಜನ ಶಾಲೆಯನ್ನು ನಿರ್ಮಿಸಿದ್ದು ಇದಕ್ಕೆ "ಶ್ರೀ ಭಾರತೀ ಮಂಟಪ ಉದಯಾದ್ರಿ" ಎಂದು ನಾಮಂಕಿತದೊಂದಿಗೆ ಲೋಕಾರ್ಪಣೆ ಮಾಡಿರುತ್ತೇವೆ.

2018ರಲ್ಲಿ ಶ್ರೀ ಕ್ಷೇತ್ರದ ಒಳಗಿನ ಮತ್ತು ಹೊರಗಿನ 3 ಸುತ್ತಿಗೆ ಜಿ.ಐ. ಶೀಟಿನ ಮೇಲ್ಛಾವಣಿ ಮತ್ತು ಹೊರಗಿನ ಸುತ್ತಿನ ನೆಲಕ್ಕೆ ಗ್ರಾನೈಟನ್ನು ಹಾಸುವ ಕೆಲಸವು ಮುಗಿದಿರುತದೆ. ಶ್ರೀ ಕ್ಷೇತ್ರದಲ್ಲಿ 2021–22 ನೇ ವರ್ಷದಲ್ಲಿ ಬ್ರಹ್ಮಕಲಶೋತ್ಸವವನ್ನು ನೆರವೇರಲಿರುವ ಸಂದರ್ಭದಲ್ಲಿ ಶ್ರೀ ಕ್ಷೇತ್ರದ ತಂತ್ರಿಯವರಾದ ಬ್ರಹ್ಮಶ್ರೀ ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರ ಸಲಹೆಯಂತೆ ಪುಷ್ಪ ರಥವನ್ನು ನಿರ್ಮಾಣ ಮಾಡಿ ಶ್ರೀ ದೇವರಿಗೆ ಅರ್ಪಿಸಲು ತೀರ್ಮಾನಿಸಿದ್ದು ಈ ಪುಷ್ಪ ರಥಕ್ಕೆ ಅಂದಾಜು ರೂ.13 ಲಕ್ಷ ಖರ್ಚು ತಗುಲಲಿದ್ದು ಈ ದೇವತಾ ಕಾರ್ಯಕ್ಕೆ ತಾವುಗಳು ಉದಾರ ದೇಣಿಗೆಯನ್ನು ನೀಡಬೇಕೆಂದು ಭಕ್ತಾಭಿಮಾನಿಗಳಲ್ಲಿ ವಿನಂತಿಸಿಕೊಳ್ಳುತ್ತೇವೆ.

**ತಮ್ಮ ಹೃತ್ಪೂರ್ವಕ ದೇಣಿಗೆಯನ್ನು ಕರ್ಣಾಟಕ ಬ್ಯಾಂಕ್, ಪಡುಬಿದ್ರಿ ಶಾಖೆಯ ಉಳಿತಾಯ ಖಾತೆ ಸಂಖ್ಯೆ 6102500100134701 (IFSC Code : KARB000610) ಜಮಾ ಮಾಡಬೇಕಾಗಿ ವಿನಂತಿ.**

| | | |
|---|---|---|
| ಶ್ರೀ ಕರುಣಾಕರ ಬೆಳ್ಳೆ | ಶ್ರೀ ರಘುವೀರ ರಾವ್ | ಶ್ರೀ ಶ್ರೀನಿವಾಸ ಶರ್ಮ |
| ಗೌರವಾಧ್ಯಕ್ಷರು | ಅಧ್ಯಕ್ಷರು | ಕಾರ್ಯದರ್ಶಿ ಮೊ: 9945933363 |
| ಶ್ರೀ ಪಿ.ಡಿ. ಶೇಖರ ರಾವ್ | | ಶ್ರೀ ಜಗದಾಭಿರಾಮ ಸ್ವಾಮಿ |
| ಖಜಾಂಚಿ | | ಪ್ರಧಾನ ಅರ್ಚಕರು ಮೊ : 9448626220 |

ಮತ್ತು ಸರ್ವ ಸದಸ್ಯರು, ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಪಡುಬಿದ್ರಿ

# ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.19-08-2019 ಮತ್ತು ತಾ.17-09-2019 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.07-09-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.20-08-2019 ಮತ್ತು ತಾ.03-09-2019 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿಅಮ್ಮನವರ ದೇವಸ್ಥಾನದ ಶ್ರೀ ನಾಗದೇವರ ಸನ್ನಿಧಿಯಲ್ಲಿ ನಾಗರಪಂಚಮಿ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿತು.



ವಿಷ್ಣುಮಂಗಳ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಏಕ ದಿನ ಕುಣಿತ ಭಜನಾ ಶಿಬಿರ, ಸ್ಥಳೀಯ ಹೃಷಿಕೇಶ ಭಕ್ತವೃಂದ ಇದರ ಪ್ರಾಯೋಜಕತ್ವದಲ್ಲಿ ಜರಗಿತು.



ಕೇರಳ ರಾಜ್ಯದ ಕಲಾವಿದರ ಒಕ್ಕೂಟವಾದ ಸವಾಕ್ನ ಮಹಿಳಾ ಘಟಕದ ಆಶ್ರಯದಲ್ಲಿ ಆಲಪ್ಪಿಯಲ್ಲಿ ನಡೆದ ಸಮ್ಮೇಳನದ ಸಂದರ್ಭದಲ್ಲಿ ಕಾಸರಗೋಡಿನ ಸಂಗೀತ ವಿದುಷಿ ಶ್ರೀಮತಿ ರಾಧಾಮುರಳೀಧರರನ್ನು ಸನ್ಮಾನಿಸಿ ಗೌರವಿಸಲಾಯಿತು




ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿಅಮ್ಮನವರ ದೇವಸ್ಥಾನದ ಶ್ರೀ ನಾಗದೇವರ ಸನ್ನಿಧಿಯಲ್ಲಿ ನಾಗರಪಂಚಮಿ ಉತ್ಸವ ವಿಜೃಂಭಣೆಯಿಂದ ತಂತ್ರಿಗಳಾದ ವೇ.ಮೂ.ಉಮೇಶ ಬಾಯಿರಿ ಮತ್ತು ಅರ್ಚಕ ಅನಂತಪದ್ಮನಾಭ ರಾವ್ ಇವರ ನೇತೃತ್ವದಲ್ಲಿ ಜರುಗಿತು.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು





## ಶುಭ ವಿವಾಹ

ಕೊಲ್ಲೂರು ಶ್ರೀ ಸುಬ್ರಹ್ಮಣ್ಯ ಹೆಬ್ಬಾರ್ ಮತ್ತು ಶ್ರೀಮತಿ ಉಮಾ ದೇವಿ ಇವರ ಪುತ್ರಿ **ಮಾನಸ** ಹಾಗೂ ಪುತ್ತೂರು ಬಪ್ಪಳಿಗೆ ಡಾ. ದೇವರಾಜ ಜೋಷಿ ಮತ್ತು ಶ್ರೀಮತಿ ಮಾಲತಿ ಇವರ ಪುತ್ರ **ಮನೋಹರ** ಇವರ ವಿವಾಹವು **ತಾ.11-07-2019**ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★ ★★★★

ಪಾವಂಜೆ ಶ್ರೀ ದಿವಾಕರ ಹಾಗೂ ಶ್ರೀಮತಿ ಸಾವಿತ್ರಿರವರ ಪುತ್ರ **ಅವ್ಯಯ** ಹಾಗೂ ಕೊಯಿಕುಡೆ ಶ್ರೀ ಕೆ.ಬಿ ಭಾರತೀಶ ರಾವ್ ಹಾಗೂ ಶ್ರೀಮತಿ ಸಾವಿತ್ರಿ ಇವರ ಪುತ್ರಿ **ಅಮಿತಾ** ರವರ ವಿವಾಹವು ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಶ್ರೀ ಶಾರದೃತ ಸಭಾಂಗಣದಲ್ಲಿ **ತಾ.15-07-2019**ರಂದು ನೆರವೇರಿತು.

## ಶುಭ ಜನನ

ಉಡುಪಿ ಸಂಘದ ಕಾರ್ಯದರ್ಶಿಯಾದ ಶ್ರೀ ಯು. ಅರವಿಂದ ಕುಮಾರ್‌ರವರ ಪುತ್ರ ಅನುದೀಪ್ ಹಾಗೂ ಪಲ್ಲವಿ ದಂಪತಿಗಳಿಗೆ ತಾ.12-08-2019ರಂದು ಗಂಡು ಮಗುವಿನ ಜನನವಾಗಿರುತ್ತದೆ.

## ನಿಧನ

**ಶ್ರೀಮತಿ ಲಲಿತಾ**

ಗದಗದಲ್ಲಿ ವಾಸ್ತವ್ಯದಲ್ಲಿದ್ದ ದಿ। ಉಡುಪಿ ಗೋಪಾಲಕೃಷ್ಣರವರ ಧರ್ಮಪತ್ನಿ ಶ್ರೀಮತಿ ಲಲಿತಾರವರು ತಾ.10.07.2019 ರಂದು ತಮ್ಮ 77 ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಅವರು ಇಬ್ಬರು ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

★★★★ ★★★★

**ಶ್ರೀಮತಿ ಶಾರದಾ**

ಚಿಟ್ಪಾಡಿ ದಿ.ಚಿದಂಬರಯ್ಯ ಬೆಳ್ಳೆ ರವರ ಪತ್ನಿ ಶ್ರೀಮತಿ ಶಾರದಾರವರು ತಾ.14.07.2019ರಂದು ನಿಧನ ಹೊಂದಿದರು

★★★★ ★★★★

**ಶ್ರೀ ರಾಮಣ್ಣ**

ಕುಕ್ಕಿಕಟ್ಟೆ ದಿ. ವಿಷ್ಣುಮೂರ್ತಿ ರಾಯರ ಪುತ್ರ ಶ್ರೀ ರಾಮಣ್ಣ ಇವರು ತಾ.14.07.2019ರಂದು ನಿಧನಹೊಂದಿದರು

★★★★ ★★★★

**ಶ್ರೀ ಐ.ಕೆ.ಸದಾಶಿವ ರಾವ್**

ಚೆನ್ನೈನಲ್ಲಿ ವಾಸವಾಗಿದ್ದ ಶ್ರೀ ಐ.ಕೆ.ಸದಾಶಿವರಾಯರು ತಾ.31.07.2019ರಂದು ನಿಧನಹೊಂದಿದರು

★★★★ ★★★★



**ಶ್ರೀಮತಿ ಕಾಶಮ್ಮ**

ಬೆಟ್ಟದ ಮನೆ ಕಾಶಮ್ಮ ಯಾನೆ ಸುಶೀಲ ಇವರು ತಾ.31.07.2019ರಂದು ನಿಧನ ಹೊಂದಿದರು. ಇವರು ದಿ। ಬೈಲಕೆರೆ ಸುಬ್ರಾಯರ ಪುತ್ರಿ. ಇವರು ಕೃಷಿ, ಹೈನುಗಾರಿಕೆ ಹಾಗೂ ಬಾಣಂತಿ ಮದ್ದಿಗೆ ಹೆಸರುವಾಸಿಯಾಗಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಆಟಿತೊ ಆಟ ಕೂಟ"



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 28-7-2019ನೇ ರವಿವಾರ "ಆಟಿತೊ ಆಟ ಕೂಟ" ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಾಂಪ್ರದಾಯಿಕ ಆಟಗಳಾದ ಚೆನ್ನೆಮಣೆ, ಕಲ್ಲಾಟ (ಪೊಕ್ಕು) ಗೀಟಿ ಆಟಗಳನ್ನು ಉದ್ಘಾಟಿಸಿ ಚಾಲನೆ ನೀಡಲಾಯಿತು. ಚೆಸ್ ಪಂದ್ಯಾಟ ಮತ್ತು ಕೇರಂ ಪಂದ್ಯಾಟ ಎರಡೂ ವಿಭಾಗಗಳಲ್ಲಿ ನಡೆಯಿತು. ಮಧ್ಯಾಹ್ನ ಭೋಜನದಲ್ಲಿ ಆಟಿಯ ವಿಶಿಷ್ಟ ಖ್ಯಾದಗಳಾದ ಕುಡು ಸಾರು, ಉಪ್ಪಡ್ಜಿರ್ ಪಲ್ಯ, ಹಲಸಿನ ಬೋಳೆ ಹುಳಿ, ಪತ್ರೊಡೆ, ಪೂಂಬೆ ಚಟ್ನಿ, ಜಿಲೇಬಿ, ಪೇರಡ್ಯ ಪಾಯಸ, ಸಜಂಕ್ ವಡೆಗಳನ್ನು ಉಣಬಡಿಸಲಾಯಿತು. ಮಧ್ಯಾಹ್ನ ನಿವೃತ್ತ ಸೇನಾಧಿಕಾರಿ ಶ್ರೀ ಗೋಪಿನಾಥ್ ರಾವ್, ಸೇನೆಯ ಬಗ್ಗೆ ಮಾಹಿತಿ, ಯೋಧರ ಧೈರ್ಯ, ಸಾಹಸ, ಕಷ್ಟ ಕಾರ್ಪಣ್ಯಗಳ ಬಗ್ಗೆ ಉಪನ್ಯಾಸ ನೀಡಿದರು. ನಂತರ ಸಮಾಜದ ಪ್ರತಿಭೆಗಳಿಂದ ಕರೋಕೆ ರಸಮಂಜರಿ ನಡೆಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಲಲಿತಾ ಜಗನ್ನಾಥ, ಡಾ. ಜಯಲಕ್ಷ್ಮಿ, ಯುವ ವೇದಿಕೆಯ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ ಕಡಬ ಕಾರ್ಯಕ್ರಮಗಳನ್ನು ಸಂಘಟಿಸಿದರೆ ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಶ್ರೀಕಾಂತ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಬಹುಮಾನಗಳನ್ನು ವಿತರಿಸಿದರು.


**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**
ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

## ಪತ್ರಿಕೆಯ ಮಹಾಪೋಷಕರಾಗಿ ನಂದಳಿಕೆ ಪದ್ಮನಾಭ ರಾವ್



ಬೆಂಗಳೂರಿನ ಶ್ರೀ ಎನ್.ಪದ್ಮನಾಭ ರಾಯರು ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಪ್ರೋತ್ಸಾಹಿಸಿದ್ದಾರೆ. ಇವರು ಕಾರ್ಕಳ ತಾಲೂಕು ನಂದಳಿಕೆಯ ದಿ।ಎನ್. ರಾಮರಾವ್ ಮತ್ತು ದಿ। ಗುಲಾಬಿ ರಾಮರಾವ್ ದಂಪತಿಗಳ ಪುತ್ರ. ಇವರು ಗ್ರಂಥಪಾಲಕರಾಗಿ ಮಂಗಳೂರಿನಲ್ಲಿ ಸೇವೆ ಆರಂಭಿಸಿ (1964) ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಲಿಬ್.ಎಸ್‌ಸಿ ಎಂಬ ಸ್ನಾತಕೋತ್ತರ ಪದವಿ ಪಡೆದಿದ್ದಾರೆ (1982). ರಶಿಯನ್ ಭಾಷಾ ಅರ್ಹತಾ ಸರ್ಟಿಫಿಕೇಟನ್ನು 1978 ರಲ್ಲಿ ಪಡೆದಿದ್ದಾರೆ. 1990ರಿಂದ 2002 ತನಕ ಮೈಸೂರು ಹಾಗೂ ತುಮಕೂರಿನಲ್ಲಿ ಮುಖ್ಯ ಗ್ರಂಥಾಲಯ ಅಧಿಕಾರಿಯಾಗಿ, 2002 ರಲ್ಲಿ ನಿವೃತ್ತಿಗೊಂಡು ಸದ್ಯ ಬೆಂಗಳೂರಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ, ಇವರ ಪತ್ನಿ ಶ್ರೀಮತಿ ಪದ್ಮಲತಾ ಕಾಂತಾವರ. ಇವರ ಪುತ್ರರಾದ ಎನ್.ವಿವೇಕ್ ಮತ್ತು ವಿನಾಯಕ ನಂದಳಿಕೆ ವಿವಾಹಿತರಾಗಿದ್ದು ಉತ್ತಮ ಹುದ್ದೆಯಲ್ಲಿದ್ದಾರೆ. ಶ್ರೀಯುತರು ವೃತ್ತಿಪರ ಲೇಖನಗಳನ್ನು ಬರೆದು ಪ್ರಕಟಿಸಿ ಕನ್ನಡ ಸಾರಸ್ವತ ಲೋಕಕ್ಕೆ ಬಹಳಷ್ಟು ಕೊಡುಗೆ ಕೊಟ್ಟಿದ್ದಾರೆ. “ನೆನಪಿನಂಗಳದಿಂದ ನಮ್ಮ ಗುರು” ಹಾಗೂ “ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು” ಮತ್ತು “ಗ್ರಂಥ ಸುಭಾಷಿತಗಳು” ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹುಟ್ಟೂರು ನಂದಳಿಕೆಯಲ್ಲಿ ಕವಿ ಮುದ್ದಣ್ಣನ ಶತಮಾನೋತ್ಸವ (1970) ಸಮಾರಂಭದ ವ್ಯವಸ್ಥೆಯಲ್ಲಿ ಸಕ್ರಿಯ ಪಾತ್ರ ನಿರ್ವಹಿಸಿದ್ದಾರೆ. ಇವರು ಶ್ರೀ ಶಾರದಾ ಪತ್ರಿಕೆಯ ಚಂದಾದಾರರಾಗಿದ್ದು ಈಗ ‘ಶಾರದಾ ವೇದಿಕೆ’ ಯ ಮಹಾಪೋಷಕರಾಗುತ್ತಿರುವ ಈ ಶುಭಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳು.

## ಶ್ರೀ ಗಣೇಶ್ ರಾವ್ ಕುಂಭಾಷಿಯವರಿಗೆ ಸನ್ಮಾನ



ಉಡುಪಿ ಜಿಲ್ಲಾ ಬ್ರಾಹ್ಮಣ ಸಂಘದ ಕಾರ್ಯದರ್ಶಿಗಳಾದ ಶ್ರೀ ಗಣೇಶ್ ರಾವ್ ಕುಂಭಾಷಿ ಹಾಗೂ ಡಾ। ಸಂಪತ್ ಕುಮಾರ್‌ರವರನ್ನು ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ರಜತ ಮಹೋತ್ಸವದ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ರಾಜ್ಯ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟರಮಣ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.



## ಶ್ರೀ ವಿಷ್ಣುಪ್ರಸಾದ್ ಶಾಸ್ತ್ರಿಗೆ ಅಮೇರಿಕಾದಲ್ಲಿ ಎಂ.ಎಸ್.ಪದವಿ

ಕುಳಾಯಿಯಲ್ಲಿ ವಾಸ್ತವ್ಯದಲ್ಲಿರುವ ಕೆಡೆಂಜಿ ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರೆ ಇವರ ಸುಪುತ್ರ ಚಿ। ವಿಷ್ಣುಪ್ರಸಾದ ಶಾಸ್ತ್ರಿಯವರು ಅಮೇರಿಕಾದ ಅರಿಜೋನಾ ರಾಜ್ಯ ವಿಶ್ವ ವಿದ್ಯಾಲಯದ ಮಾಸ್ಟರ್ ಇನ್ ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಉನ್ನತ ಅಂಕ ಗಳಿಸಿ ತೇರ್ಗಡೆ ಹೊಂದಿರುತ್ತಾರೆ.

## ಶುಭಾಶಯಗಳು



**ಚಿ। ಸೌ। ಮಾನಸ ಹಾಗೂ ಚಿ। ಮನೋಹರ**

ವೈವಾಹಿಕ ಜೀವನಕ್ಕೆ ಪಾದಾರ್ಪಣೆಗೈದ
ಈ ಶುಭ ಸಂದರ್ಭದಲ್ಲಿ ನಿಮ್ಮ ಮುಂದಿನ ದಿನಗಳು
ಸುಖ ಸಮೃದ್ಧಿಯಿಂದ ತುಂಬಿ ತುಳುಕಲಿ ಎಂದು ಹಾರೈಸುತ್ತೇವೆ.

ಶ್ರೀ ಸುಬ್ರಹ್ಮಣ್ಯ ಹೆಬ್ಬಾರ್ ಮತ್ತು
ಶ್ರೀಮತಿ ಉಮಾ ದೇವಿ
ಕೊಲ್ಲೂರು

ಡಾ ದೇವರಾಜ ಜೋಷಿ
ಮತ್ತು ಶ್ರೀಮತಿ ಮಾಲತಿ
ಪುತ್ತೂರು ಬಪ್ಪಳಿಗೆ


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**“ಗೃಹ ಸಾಲ”**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
Real Estate Developer Rating CRISIL DA3+

## ಮಣಿಪಾಲ ಕೆ.ಎಂ.ಸಿ.ಯ ಡೀನ್ ಆಗಿ ಡಾ| ಶರತ್ ರಾವ್ ನೇಮಕ




ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್ ಆಗಿ ಡಾ| ಶರತ್ ಕುಮಾರ್ ರಾವ್ ಕೆ. ಇವರು ನೇಮಕವಾಗಿದ್ದಾರೆ. ಇವರು ಕಾರ್ಕಳದ ಶ್ರೀಮತಿ ಇಂದಿರಾ ಹಾಗೂ ದಿ| ಪ್ರೊ| ಕೆ. ಸೂರ್ಯನಾರಾಯಣ ರಾವ್ ದಂಪತಿಗಳ ಪುತ್ರ. ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಪದವಿಯನ್ನೂ, ಮಂಗಳೂರು ಕೆ.ಎಂ.ಸಿ.ಯಿಂದ ಎಂ.ಎಸ್. (ಆರ್ಥೋ) ಪದವಿಯನ್ನೂ ಪಡೆದು ಕಸ್ತೂರ್ಬಾ ವೈದ್ಯಕೀಯ ವಿದ್ಯಾಲಯದಲ್ಲಿ ಎಲುಬು ಕೀಲು ವಿಭಾಗದಲ್ಲಿ ಪ್ರಾಧ್ಯಾಪಕ ವೃತ್ತಿಯನ್ನು ಆರಂಭಿಸಿದರು. ಇವರು ಗಂಟು ಬದಲಿ ಜೋಡಣೆ ಹಾಗೂ ಆರ್ಥೋಸ್ಕೋಪಿ ಚಿಕಿತ್ಸೆಯಲ್ಲಿ ಪರಿಣಿತರು. ಇವರು ಕರ್ನಾಟಕ ರಾಜ್ಯ ಎಲುಬು ಕೀಲು ತಜ್ಞರ ಸಂಘದ ಅಧ್ಯಕ್ಷರಾಗಿಯೂ, ದಕ್ಷಿಣ ಭಾರತ ಎಲುಬು ಕೀಲು ತಜ್ಞರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಪಂಚದಾದ್ಯಾಂತ ಇವರ ವೈದ್ಯಕೀಯ ಸಂಶೋಧನಾ ಬರಹಗಳು ಪ್ರಕಟವಾಗಿವೆ. ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಹಂತ ಹಂತವಾಗಿ ಪದೋನ್ನತಿ ಪಡೆದ ಇವರು ಈ ತಿಂಗಳ ಆಗಸ್ಟ್‌ನಿಂದ ಈ ಕಾಲೇಜಿನ ಡೀನ್ ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇವರಿಗೆ ಅಭಿನಂದನೆಗಳು.


## ವೀಣಾವಾದನದಲ್ಲಿ ಪ್ರಥಮ ಸ್ಥಾನಿ ದಿಶಾ ರಾವ್




ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ವತಿಯಿಂದ ನಡೆದ 2018–19ರ ಶಾಸ್ತ್ರೀಯ ವಾದ್ಯ ಸಂಗೀತ ವೀಣಾ ವಾದನ ಮಾಧ್ಯಮಿಕ ಪರೀಕ್ಷೆಯಲ್ಲಿ ದಿಶಾ ರಾವ್ ಅವರು ಉಡುಪಿ ಜಿಲ್ಲೆಗೆ ವೀಣಾವಾದನದಲ್ಲಿ ಪ್ರಥಮ (Distinction) ಸ್ಥಾನಿಯಾಗಿದ್ದಾರೆ. ಇವರು ಉಡುಪಿ ಅಜ್ಜರಕಾಡಿನ ಶಾಂತಾಲಯ ಸಂಗೀತ ಸಂಸ್ಥೆಯ ಬಿ. ಪ್ರಕಾಶ್‌ರಾವ್ ಮತ್ತು ಇಂದ್ರಾಳಿಯ ನಿನಾದ ಸಂಗೀತ ಸಂಸ್ಥೆಯ ವಿ. ರವಿಕುಮಾರ್ ಅವರುಗಳ ಮಾರ್ಗದರ್ಶನದಲ್ಲಿ ಈ ಸಾಧನೆ ಮಾಡಿದ್ದಾರೆ. ಎಂ.ಕಾಂ. ಪದವೀಧರೆಯಾಗಿರುವ ಈಕೆ ಉಡುಪಿಯ ಸಂಗೀತ ತಜ್ಞ ಪ್ರಕಾಶ್ ರಾವ್ ಮತ್ತು ಆರೋಗ್ಯ ಇಲಾಖೆ ಸಿಬ್ಬಂದಿ ಶ್ರೀಲತಾ ದಂಪತಿಯವರ ಪುತ್ರಿ ಹಾಗೂ ವಿಶೇಷ ಆಹ್ವಾನದ ಮೇರೆಗೆ ಇದೇ ತಿಂಗಳು 15 ರಿಂದ 19 ರವರೆಗೆ ನ್ಯೂ ಡೆಲ್ಲಿಯಲ್ಲಿ ಕಾರ್ಯಕ್ರಮ ನಡೆಸಲು ಪ್ರಯಾಣಿಸಲಿದ್ದಾರೆ.



## ಚಿಣ್ಣರ ಅಂಗಳ







ಕುಮಾರಿ ದೃಷ್ಟಿ (4ನೇ ತರಗತಿ) ಇವರು ಅಮೇರಿಕಾದಲ್ಲಿರುವ ಶ್ರೀ ಆನಂದ ಹಾಗೂ ಶ್ರೀಮತಿ ವೃಷಾಲಿ ಇವರ ಪುತ್ರಿ.

## ಶ್ರೀಶಾರದಾ ಮಂಟಪದಲ್ಲಿ ನಾಗರಪಂಚಮಿ





ತಾ.05–08–2019ರಂದು ಶ್ರೀ ಶಾರದಾಮಂಟಪದ ವಠಾರದಲ್ಲಿರುವ ಶ್ರೀ ನಾಗದೇವರ ಗುಡಿಯಲ್ಲಿ ನಾಗರಪಂಚಮಿಯ ಆಚರಣೆ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ ಮಂಜುನಾಥ ಹೆಬ್ಬಾರ್ ಹಾಗೂ ಸಮಾಜಬಾಂಧವರು ಮತ್ತು ಪರಿಸರದ ಭಕ್ತಾದಿಗಳು ನಾಗದೇವರಿಗೆ ಪಂಚಾಮೃತ ತನು ಸೇವೆ ಸಮರ್ಪಿಸಿ ಸಮಾಜದ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿದರು.

## ಶ್ರೀಶಾರದಾ ಮಂಟಪದಲ್ಲಿ ಸ್ವಚ್ಛತಾ ಕಾರ್ಯಕ್ರಮ



ತಾ.04–08–2019ರಂದು ನಾಗರಪಂಚಮಿಯ ಮುನ್ನಾದಿನ ಪ್ರತಿವರ್ಷದಂತೆ ಈ ವರ್ಷವೂ ಶ್ರೀ ಶಾರದಾ ಮಂಟಪದ ಪರಿಸರದಲ್ಲಿ ಸ್ವಚ್ಛತಾ ಕಾರ್ಯಕ್ರಮವು ನೆರವೇರಿತು. ಶ್ರೀ ವಸಂತರಾವ್ ಕರಂಬಳ್ಳಿಯವರ ಮುತುವರ್ಜಿಯಲ್ಲಿ ನಮ್ಮ ಸಮಾಜಬಾಂಧವರು ಶ್ರೀ ಶಾರದಾ ದೇವಸ್ಥಾನ, ನಾಗದೇವರ ಗುಡಿ ಹಾಗೂ ಶ್ರೀ ಶಾರದಾ ಮಂಟಪದ ಸುತ್ತುಮುತ್ತಲ ಪರಿಸರವನ್ನು ಸ್ವಚ್ಛಗೊಳಿಸಿದರು.

## ಸರಕಾರದಿಂದ ಪ್ರೋತ್ಸಾಹಕ ಅನುದಾನ




ಕರ್ನಾಟಕ ರಾಜ್ಯ ಸರ್ಕಾರದ IT-BT ಇಲಾಖೆಯವರು ಆಯೋಜಿಸಿದ್ದ ELEVATE -2019 ಸ್ಪರ್ಧೆಯಲ್ಲಿ ಮಣಿಪಾಲದ ಡಾ| ಸಂಪತ್‌ಕುಮಾರ್ ಕುಂಭಾಷಿಯವರ Startup "ಕುಮುದಾ ಹೆಲ್ತ್ ಟೆಕ್" ಗೆಲುವನ್ನು ಸಾಧಿಸಿ ರೂ.48.50 ಲಕ್ಷ ಅನುದಾನವನ್ನು ಪಡೆದಿರುತ್ತದೆ. ಇವರಿಗೆ ಅಭಿನಂದನೆಗಳು.




Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org